ಸೃಜನಿ

SRUJANI: Indian Journal of Innovative Research and Development (SIJIRD)
Volume-3 Issue 5, November - December 2024, Pp. 27-36
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಕೃಷಿಕರ ಬದುಕಿನಲ್ಲಿ ಕೃಷಿ ಉತ್ಪನ್ನ ಮಾರುಕಟ್ಟೆಗಳ ಪಾತ್ರ

ಹನುಮಂತ[1] ಮತ್ತು ಡಾ.ವೈ.ಎಸ್.ವಗ್ಗಿ[2]
[1]ಸಂಶೋಧನಾ ವಿದ್ಯಾರ್ಥಿ, ಅಭಿವೃದ್ಧಿ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ,ಹಂಪಿ,ವಿದ್ಯಾರಣ್ಯ
[2]ಸಹ ಪ್ರಾಧ್ಯಾಪಕರು, ಸರಕಾರಿ ಮಹಾವಿದ್ಯಾಲಯ (ಸ್ವಾಯತ್ತ), ಸೇಡಂ ರಸ್ತೆ, ಕಲಬುರಗಿ.

**Abstract:**
*ಜಾಗತೀಕರಣದ ಪ್ರಕ್ರಿಯೆಗಳನ್ನು ಗಮನಿಸಿದರೆ ಕೃಷಿ ಮಾರುಕಟ್ಟೆಯಲ್ಲಿ ರೈತನ ಸ್ಥಿತಿ ಗಂಭೀರವಾಗಿದೆ. ಅಂತರಾಷ್ಟ್ರೀಯ ಮಾರಾಟದ ಅಂಶಗಳು ಅಥವಾ ಬೆಲೆ ನಿಗದಿಯ ವಿಷಯದಲ್ಲಿ ನಿರ್ದಿಷ್ಟವಾದ ಅಂಶಗಳನ್ನು ಗುರುತಿಸಿಕೊಳ್ಳಲಾಗದೆ, ಸಮಸ್ಯೆಗಳಿಗೆ ಸಿಲುಕುವಂತಾಗಿದೆ. ಮಾರುಕಟ್ಟೆ ಪುರಾತನವಾದ ಪ್ರಕ್ರಿಯೆಯಾಗಿದೆ. ಹೇಗೆಂದರೆ ವಸ್ತು ವಿನಿಮಯ ಪದ್ಧತಿಯಿಂದ ಪ್ರಾರಂಭವಾದ ಮಾರುಕಟ್ಟೆ ಇಂದು ಡಿಜಿಟಲ್‌ವರೆಗೂ ತಲುಪಿದೆ. ರೈತ ಮತ್ತು ಕೃಷಿಗೆ ನೇರವಾದ ಸಂಬಂಧವಿರುವಂತೆ ಕೃಷಿ ಮತ್ತು ಮಾರುಕಟ್ಟೆ ನಡುವೆಯೂ ನೇರ ಸಂಬಂಧವಿದೆ. ಕೃಷಿಯಿಂದ ಬಂದಂತಹ ಬೆಳೆಗಳನ್ನು ಮಾರುಕಟ್ಟೆಗೆ ಕಳುಹಿಸುವುದರಿಂದ ರೈತರು ಸಹ ಮಾರುಕಟ್ಟೆಗೆ ಪ್ರವೇಶ ಮಾಡುತ್ತಾರೆ. ಮಾರುಕಟ್ಟೆಯಲ್ಲಿ ರೈತರು ತಾನು ಬೆಳೆದ ಬೆಳೆಗಳಿಗೆ ಸೂಕ್ತವಾದ ಬೆಲೆ ಸಿಗುತ್ತದೆ ಎಂದು ಬಹಳ ಆಶಾವಾದವನ್ನು ಹೊಂದಿರುತ್ತಾರೆ. ಪ್ರಸ್ತುತ ಲೇಖನದಲ್ಲಿ ರೈತರ ಬದುಕಿನಲ್ಲಿ ಕೃಷಿ ಉತ್ಪನ್ನ ಮಾರುಕಟ್ಟೆಗಳ ಪಾತ್ರ ಯಾವ ರೀತಿಯ ಪಾತ್ರವಹಿಸುತ್ತದೆ ಎಂಬುದನ್ನು ವಿಶ್ಲೇಷಿಸಲಾಗಿದೆ.*

**Keywords:** *ರೈತ, ರೈತರ ಬದುಕು, ವ್ಯವಸಾಯಗಾರ, ಕೃಷಿ, ಕೃಷಿ ಉತ್ಪನ್ನ ಮಾರುಕಟ್ಟೆ.*

## ಪೀಠಿಕೆ

ಕೃಷಿ ಭಾರತದ ಆರ್ಥಿಕತೆಯ ಪ್ರಮುಖ ಮೂಲವಾಗಿದೆ. ಕೃಷಿಕರು ಬೆಳೆಯುವ ಉತ್ಪನ್ನಗಳು ರಾಷ್ಟ್ರಕ್ಕೆ ಆಹಾರ ಸುರಕ್ಷತೆಗೆ ಬುನಾದಿಯಾಗಿದೆ. ಆದಾಗ್ಯೂ, ಈ ಕೃಷಿ ಉತ್ಪನ್ನಗಳ ಮಾರುಕಟ್ಟೆ ಪ್ರಕ್ರಿಯೆ ರೈತರ ಜೀವನೋಪಾಯ ಮತ್ತು ಆರ್ಥಿಕ ಸ್ಥಿತಿಯನ್ನು ಪ್ರಭಾವಿಸುತ್ತದೆ. ಕೃಷಿ ಉತ್ಪನ್ನ ಮಾರುಕಟ್ಟೆಗಳು ರೈತರ ಬೆಳೆದ ಬೆಳೆಗಳಿಗೆ ಸೂಕ್ತ ಬೆಲೆ ನೀಡುವಂತೆ ಮಾಡಬೇಕಾದರೆ, ಅವುಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸುವುದು ಅವಶ್ಯಕವಾಗಿದೆ. ರೈತರು ತಮ್ಮ ಬೆಳೆಗಳನ್ನು ಮಾರಾಟ ಮಾಡಲು ದೀರ್ಘಕಾಲದಿಂದ ಮಧ್ಯವರ್ತಿಗಳ ಮೇಲೆ ಅವಲಂಬಿತರಾಗಿದ್ದಾರೆ, ಇದರಿಂದಾಗಿ ಅವರ ಆದಾಯವು ಹಿಂಸುವಂತಾಗಿದೆ. ಹೆಚ್ಚಿನ ರೈತರು ಮಾರುಕಟ್ಟೆ ಮಾಹಿತಿ ಮತ್ತು ಮೂಲಸೌಕರ್ಯಗಳ ಕೊರತೆಯಿಂದ ತೊಂದರೆ ಅನುಭವಿಸುತ್ತಿದ್ದಾರೆ. ಸರ್ಕಾರ ಮತ್ತು ಖಾಸಗಿ ಸಂಸ್ಥೆಗಳ ಕೆಲವು ಕ್ರಮಗಳು ಇದನ್ನು ಸುಧಾರಿಸಲು ಪ್ರಯತ್ನಿಸಿದ್ದರೂ, ಬೆಳೆ ಬೀರಿದ ಖರ್ಚುಕ್ಕೂ ರೈತರಿಗೆ ದೊರೆಯುವ ಲಾಭಕ್ಕೂ ಹೊಂದಾಣಿಕೆಯ ಕೊರತೆ ಇಂದಿಗೂ ಇದೆ.

ಈ ಸಂಶೋಧನೆಯ ಮೂಲಕ, ಕೃಷಿ ಮಾರುಕಟ್ಟೆಗಳ ಕಾರ್ಯಪದ್ಧತಿ, ಅವುಗಳಲ್ಲಿ ಇರುವ

***Please cite this article as:*** ಹನುಮಂತ ಮತ್ತು ವೈ.ಎಸ್.ವಗ್ಗಿ. (2024). ಕೃಷಿಕರ ಬದುಕಿನಲ್ಲಿ ಕೃಷಿ ಉತ್ಪನ್ನ ಮಾರುಕಟ್ಟೆಗಳ ಪಾತ್ರ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 3(5), 27–36

ಸವಾಲುಗಳು ಮತ್ತು ರೈತರು ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಅಧ್ಯಯನ ಮಾಡುವುದು ಉದ್ದೇಶವಾಗಿದೆ. ರೈತರ ಆರ್ಥಿಕ ಬಾಳಮಟ್ಟವನ್ನು ಸುಧಾರಿಸಲು ಕೃಷಿ ಮಾರುಕಟ್ಟೆಗಳ ಪ್ರಭಾವ ಮತ್ತು ಸುಧಾರಣಾ ಕ್ರಮಗಳನ್ನು ವಿಶ್ಲೇಷಿಸುವುದು ಇದರ ಪ್ರಮುಖ ಉದ್ದೇಶವಾಗಿದೆ.

ಪ್ರಸ್ತುತ ದಿನಗಳಲ್ಲಿ ಕೃಷಿಗೆ ಸಂಬಂಧಿಸಿದಂತಹ ಹೊಸ ಹೊಸ ಕಾನೂನುಗಳು ಬಂದರೂ ದಲ್ಲಾಳಿಗಳ, ಮಧ್ಯವರ್ತಿಗಳ ಮತ್ತು ಕೃಷಿ ಉತ್ಪನ್ನ ಮಾರುಕಟ್ಟೆಯ ಸಮಿತಿಗಳು ಅವರ ಅನುಕೂಲಕ್ಕೆ ತಕ್ಕಂತೆ ಅವರುಗಳು ಅವರವರ ಕೆಲಸಕಾರ್ಯಗಳನ್ನು ನಿರ್ವಹಿಸಿಕೊಳ್ಳುತ್ತಾರೆ. ಇದು ನಮ್ಮ ಕಣ್ಣ ಮುಂದೆ ನಡೆಯುತ್ತಿರುವ ವಾಸ್ತವವಾದಂತಹ ಸತ್ಯವಾಗಿದೆ.

ಮಾರುಕಟ್ಟೆ ಬಂದ ನಂತರ ವಸ್ತುಗಳನ್ನು ಮಾರುಕಟ್ಟೆಯಲ್ಲಿ ಮಾರಿ ಬಂದ ದುಡ್ಡನ್ನು ಬಳಸಿಕೊಂಡು ನಮಗೆ ಬೇಕಾದ ಸರಕು ಸೇವೆಗಳನ್ನು ಖರೀದಿಸುವ ಕ್ರಮಬಂತು. ಈ ಕ್ರಮ ಜೀತ ಪದ್ದತಿಯಲ್ಲೂ ಇತ್ತು. ಇವೆಲ್ಲ ದುಡಿಸುವವರ ಮತ್ತು ದುಡಿಯುವವರು ಅಗತ್ಯಗಳನ್ನು ಪೂರೈಸುವುದಕ್ಕಿಂತ ಹೆಚ್ಚಿನ ಉತ್ಪಾದನೆಯನ್ನು ಮಾಡುವ ಕ್ರಮ ಇತ್ತು. ಆದರೆ ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಉತ್ಪಾದಿಸಿದ ಸರಕುಸೇವೆಗಳನ್ನು ಮಾರಿ ತಮಗೆ ಅವಶ್ಯವಿರುವ ಸರಕು ಸೇವೆಗಳನ್ನು ಮಾರುಕಟ್ಟೆಯಿಂದ ಖರೀದಿಸುವ ಕ್ರಮ ಬೆಳೆಯಿತು. ಈ ವ್ಯವಸ್ಥೆ ವ್ಯಾಪಕ ಬೆಳೆದು ಇಂದು ಮಾರುಕಟ್ಟೆಗಾಗಿ ಉತ್ಪಾದನೆ ಮತ್ತು ಮಾರುಕಟ್ಟೆಯಿಂದ ಅಗತ್ಯ ವಸ್ತುಗಳನ್ನು ಖರೀದಿಸಿ ಅನುಭೋಗಿಸುವ ಸ್ಥಿತಿ ಇದೆ

**ನಿಯಂತ್ರಿತ ಕೃಷಿ ಮಾರುಕಟ್ಟೆಗಳು**

ನಿಯಂತ್ರಿತ ಮಾರುಕಟ್ಟೆ ಎಂದರೆ ಸರ್ಕಾರದ ನಿಯಂತ್ರಣ ಮತ್ತು ನಿಬಂಧನೆಗಳಿಗೆ ಅನುಗುಣವಾಗಿ ನಡೆಯುವ ಮಾರುಕಟ್ಟೆಯ ವ್ಯವಸ್ಥೆಯಾಗಿದೆ. ಇದು ಉತ್ಪಾದಕ ಮಾರಾಟಗಾರರಿಗೆ ಉತ್ತಮ ಸೌಲಭ್ಯಗಳನ್ನು ಒದಗಿಸುವ, ಮಾರುಕಟ್ಟೆಯಲ್ಲಿನ ಅನಾರೋಗ್ಯಕರ, ಅಕ್ರಮ ಚಟುವಟಿಕೆಗಳನ್ನು ನಿರ್ಮೂಲನೆ ಮಾಡುವ ಮತ್ತು ಮಾರುಕಟ್ಟೆಯ ವೆಚ್ಚಗಳನ್ನು ತಗ್ಗಿಸುವ ಮುಖ್ಯ ಧ್ಯೇಯಗಳನ್ನು ಹೊಂದಿರುತ್ತದೆ. ಈ ಧ್ಯೇಯಗಳ ಸಾಧನೆಗಾಗಿ ಸರಕಾರವು ಸೂಕ್ತವಾದ ಶಾಸನವನ್ನು ಜಾರಿಗೊಳಿಸುವ ಮೂಲಕ ಮಾರುಕಟ್ಟೆಯ ವ್ಯವಸ್ಥೆಯನ್ನು ನಿಬಂಧನೆಗೆ ಒಳಪಡಿಸುತ್ತದೆ. ನಿಯಂತ್ರಿತ ಮಾರುಕಟ್ಟೆಗಳನ್ನು ರಾಜ್ಯ ಸರ್ಕಾರಗಳು ಸ್ಥಾಪಿಸುತ್ತವೆ. ಇವುಗಳ ನಿರ್ವಹಣೆಗೆ ಅಗತ್ಯವಿರುವ ನಿಯಮ ಮತ್ತು ನಿಬಂಧನೆಗಳನ್ನು ಸರ್ಕಾರವೇ ರೂಪಿಸುತ್ತದೆ.

**ಅಧ್ಯಯನದ ಉದ್ದೇಶಗಳು**

- ಪ್ರಸ್ತುತ ಅಧ್ಯಯನದಲ್ಲಿ ಕೃಷಿಕರ ಸ್ಥಿತಿಗತಿಗಳನ್ನು ತಿಳಿದುಕೊಳ್ಳುವುದು, ಹಾಗೂ
- ಕೃಷಿಕರ ಬದುಕಿನಲ್ಲಿ ಕೃಷಿ ಉತ್ಪನ್ನ ಮಾರುಕಟ್ಟೆಗಳು ಯಾವ ರೀತಿಯ ಪಾತ್ರವಹಿಸುತ್ತಿವೆ ಎಂಬುದನ್ನು ಅಧ್ಯಯನ ಮಾಡುವುದು.

**ಸಂಶೋಧನಾ ವಿಧಾನಗಳು**

ಪ್ರಸ್ತುತ ಅಧ್ಯಯನಕ್ಕೆ ಪ್ರಾಥಮಿಕ ಮತ್ತು ಮಾಧ್ಯಮಿಕ ಮೂಲಗಳಿಂದ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಮಾಧ್ಯಮಿಕ ಮಾಹಿತಿಯನ್ನು ಗ್ರಂಥಗಳು ನಿಯತಕಾಲಿಕೆಗಳು, ಲೇಖನಗಳು, ಪ್ರಕಟಿತ ಮತ್ತು ಅಪ್ರಕಟಿತ ಸಂಶೋಧನಾ ಪ್ರಬಂಧಗಳು, ಸರ್ಕಾರ ಮತ್ತು ಸರ್ಕಾರೇತರ ಸಂಸ್ಥೆಗಳಿಂದ ದೊರೆಯುವ ವರದಿಗಳು ಹಾಗೂ ಅಂತರ್ಜಾಲ ಮೂಲಗಳಿಂದ ಸಂಗ್ರಹಿಸಲಾಗಿದೆ. ಪ್ರಾಥಮಿಕ ಮಾಹಿತಿಯನ್ನು ರೈತರ ಕುಟುಂಬ ಸಮೀಕ್ಷೆ, ಅವಲೋಕನ, ಸಂದರ್ಶನ, ಗುಂಪು ಚರ್ಚೆ ಮುಂತಾದ ವಿಧಾನಗಳನ್ನು ಬಳಸಿಕೊಂಡು ಸಂಗ್ರಹಿಸಲಾಗಿದೆ.

**ಮಾದರಿ ವಿಧಾನ**

ಪ್ರಸ್ತುತ ಅಧ್ಯಯನಕ್ಕೆ ಸರಳ ಯಾದೃಚಿಕ ಮಾದರಿ ವಿಧಾನವನ್ನು ಅಳವಡಿಸಿಕೊಂಡಿದ್ದು ಕೊಪ್ಪಳ

ಜಿಲ್ಲೆಯ ಗಂಗಾವತಿ, ಕನಕಗಿರಿ ಹಾಗೂ ಶ್ರೀರಾಮನಗರ ಪ್ರದೇಶಗಳ 300 ರೈತರನ್ನು ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡು ಅಧ್ಯಯನ ಮಾಡಲಾಗಿದೆ.

**ಕೋಷ್ಟಕ 1: ನಿಯಂತ್ರಿತ ಮಾರುಕಟ್ಟೆಯ ಕುರಿತು ರೈತರಿಗಿರುವ ಅರಿವಿನ ವಿವರ**

| ವಿವರಗಳು | ಗಂಗಾವತಿ | | ಕನಕಗಿರಿ | | ಶ್ರೀರಾಮನಗರ | | ಒಟ್ಟು | |
|---|---|---|---|---|---|---|---|---|
| | ಸಂ. | ಶೇ. | ಸಂ. | ಶೇ. | ಸಂ. | ಶೇ. | ಸಂ. | ಶೇ. |
| ಹೌದು | 91 | 65 | 46 | 65.8 | 64 | 71 | 201 | 67 |
| ಇಲ್ಲ | 49 | 35 | 24 | 34.2 | 26 | 29 | 99 | 33 |
| **ಒಟ್ಟು** | **140** | **100** | **70** | **100** | **90** | **100** | **300** | **100** |

**ಮೂಲ: ಕ್ಷೇತ್ರಕಾರ್ಯದ ಮಾಹಿತಿ**

ಕೋಷ್ಟಕ 1ರಲ್ಲಿ ನಿಯಂತ್ರಿತ ಮಾರುಕಟ್ಟೆಯ ಬಗ್ಗೆ ನಿಮಗೆ ಏನಾದರೂ ಅರಿವಿದೆಯೇ ಎಂಬುದನ್ನು ಕುರಿತು ವಿವರಿಸಲಾಗಿದೆ. ಕೋಷ್ಟಕದ ಪ್ರಕಾರ ಶೇ.67 ರಷ್ಟು ರೈತರು ಹೌದು ಎಂಬ ಉತ್ತರವನ್ನು ನೀಡಿದ್ದಾರೆ. ಪ್ರದೇಶವಾರು ನೋಡಿದಾಗ ಹೌದು ಎನ್ನುವವರ ಪ್ರಮಾಣ ಶ್ರೀರಾಮನಗರದಲ್ಲಿ ಹೆಚ್ಚಿದ್ದರೆ, ಇಲ್ಲ ಎನ್ನುವವರ ಪ್ರಮಾಣ ಗಂಗಾವತಿಯಲ್ಲಿಅಧಿಕವಿರುವುದನ್ನು ಕಾಣಬಹುದು.

**ಕೋಷ್ಟಕ 2: ನಿಯಂತ್ರಿತ ಮಾರುಕಟ್ಟೆಗಳಿಗೆ ಉತ್ಪನ್ನಗಳನ್ನು ತೆದುಕೊಂಡು ಹೋಗುವ ರೈತರ ವಿವರ**

| ವಿವರಗಳು | ಗಂಗಾವತಿ | | ಕನಕಗಿರಿ | | ಶ್ರೀರಾಮನಗರ | | ಒಟ್ಟು | |
|---|---|---|---|---|---|---|---|---|
| | ಸಂ. | ಶೇ. | ಸಂ. | ಶೇ. | ಸಂ. | ಶೇ. | ಸಂ. | ಶೇ. |
| ತೆಗೆದು ಕೊಂಡು ಹೊಗುತ್ತೇವೆ | 89 | 63.5 | 43 | 61.4 | 67 | 74.4 | 199 | 66.3 |
| ತೆಗೆದು ಕೊಂಡು ಹೊಗುವುದಿಲ್ಲ | 51 | 36.5 | 27 | 38.6 | 23 | 25.6 | 101 | 33.7 |
| **ಒಟ್ಟು** | **140** | **100** | **70** | **100** | **90** | **100** | **300** | **100** |

**ಮೂಲ : ಕ್ಷೇತ್ರಕಾರ್ಯದ ಮಾಹಿತಿ**

ಕೋಷ್ಟಕ 2ರ ಪ್ರಕಾರ ಅಧ್ಯಯನಕ್ಕೊಳಪಡಿಸಿರಿವ ಒಟ್ಟು ರೈತರಲ್ಲಿ ಶೇ.66.3 ರಷ್ಟು ಜನರು ತಾವು ಬೆಳೆದ ಕೃಷಿ ಉತ್ಪನ್ನಗಳನ್ನು ತೆಗೆದುಕೊಂಡು ಹೋಗುವುದಾಗಿ ತಿಳಿಸಿದ್ದಾರೆ. ಪ್ರದೇಶವಾರು ಗಮನಿಸಿದಾಗ ಮಾರುಕಟ್ಟೆಗೆ ತೆಗೆದುಕೊಂಡು ಹೋಗುವವರ ಪ್ರಮಾಣ ಶ್ರೀರಾಮನಗರ ಪ್ರದೇಶದಲ್ಲಿ ಹೆಚ್ಚಿದೆ. ಇದಕ್ಕೆ ಪ್ರತಿಯಾಗಿ ಶೇ. 33.7 ರಷ್ಟು ರೈತರು ಕೃಷಿ ಮಾರುಕಟ್ಟೆಗೆ ತೆಗೆದುಕೊಂಡು ಹೋಗುವುದಿಲ್ಲ ಎಂಬುದಾಗಿ ತಿಳಿಸಿದ್ದಾರೆ. ಈ ಪ್ರಮಾಣ ಕನಕಗಿರಿಯಲ್ಲಿ ಅಧಿಕವಾಗಿದೆ. ಮೇಲಿನ ಅಂಕಿ ಅಂಶಗಳನ್ನು ನೋಡಿದಾಗ ಅತಿ ಹೆಚ್ಚಿನ ಪ್ರಮಾಣದಲ್ಲಿ ರೈತರು ಉತ್ಪನ್ನಗಳನ್ನು ನಿಯಂತ್ರಿತ ಮಾರುಕಟ್ಟೆಗಳಿಗೆ ತೆಗೆದುಕೊಂಡು ಹೋಗಿರುವುದು ಕ್ಷೇತ್ರಕಾರ್ಯದ ಮೂಲಕ ತಿಳಿದುಬರುತ್ತದೆ.

**ಕೋಷ್ಟಕ 3: ಸರ್ಕಾರಿ ಏಜೆನ್ಸಿಗಳಿಂದ ರೈತರ ಉತ್ಪನ್ನದ ಸಂಗ್ರಹಣೆ ಇದೆಯೇ ಎಂಬುದರ ವಿವರ**

| ವಿವರಗಳು | ಗಂಗಾವತಿ | | ಕನಕಗಿರಿ | | ಶ್ರೀರಾಮನಗರ | | ಒಟ್ಟು | |
|---|---|---|---|---|---|---|---|---|
| | ಸಂ. | ಶೇ. | ಸಂ. | ಶೇ. | ಸಂ. | ಶೇ. | ಸಂ. | ಶೇ. |
| ಹೌದು | – | – | – | – | – | – | – | – |
| ಇಲ್ಲ | 140 | 100 | 70 | 100 | 90 | 100 | 300 | 100 |
| **ಒಟ್ಟು** | **140** | **100** | **70** | **100** | **90** | **100** | **300** | **100** |

**ಮೂಲ : ಕ್ಷೇತ್ರಕಾರ್ಯದ ಮಾಹಿತಿ**

**ಕೋಷ್ಟಕ 4: ರೈತರು ಕೃಷಿ ಉತ್ಪನ್ನ ಮಾರುಕಟ್ಟೆಯಿಂದ ಪಡೆದ ಪ್ರಯೋಜನಗಳ ವಿವರ**

| **ವಿವರಗಳು** | ಗಂಗಾವತಿ | | ಕನಕಗಿರಿ | | ಶ್ರೀರಾಮನಗರ | | ಒಟ್ಟು | |
|---|---|---|---|---|---|---|---|---|
| | ಸಂ. | ಶೇ. | ಸಂ. | ಶೇ. | ಸಂ. | ಶೇ. | ಸಂ. | ಶೇ. |
| ಲಾಭದಾಯಕ ಬೆಲೆಯನ್ನು ಖಚಿತಪಡಿಸಿಕೊಳ್ಳುವುದು | 20 | 14.2 | 12 | 17 | 15 | 16.6 | 47 | 15.6 |
| ಸಂಕಷ್ಟದ ಮಾರಾಟವನ್ನು ತಪ್ಪಿಸುವುದು | 18 | 12.8 | 15 | 21.4 | 12 | 13.3 | 45 | 15 |
| ಮಾರುಕಟ್ಟೆ ಮಾಹಿತಿ ಒದಗಿಸುವುದು | 23 | 16.4 | 13 | 18.5 | 14 | 15.5 | 50 | 16.6 |
| ಮೂಲಸೌಕರ್ಯ ಸರಿಯಾದ ನಿರ್ವಹಣೆ | 15 | 10.7 | 6 | 8.5 | 9 | 10 | 30 | 10 |
| ಸರಿಯಾದ ತೂಕ | 13 | 9.2 | 5 | 7 | 12 | 13.3 | 30 | 10 |
| ತಕ್ಷಣದ ಪಾವತಿ | 14 | 10 | 7 | 10 | 13 | 14.4 | 34 | 11.3 |
| ಸ್ಪರ್ಧಾತ್ಮಕ ಖರೀದಿ | 18 | 12.8 | 4 | 5.7 | 9 | 10 | 31 | 10.3 |
| ಬೆಂಬಲ ಬೆಲೆ ಖಚಿತಪಡಿಸಿಕೊಳ್ಳುವುದು | 19 | 13.5 | 8 | 11.4 | 8 | 8.8 | 35 | 11.6 |
| **ಒಟ್ಟು** | **140** | **100** | **70** | **100** | **90** | **100** | **300** | **100** |

**ಮೂಲ: ಕ್ಷೇತ್ರಕಾರ್ಯದ ಮಾಹಿತಿ**

ಕೋಷ್ಟಕ 4 ರಲ್ಲಿ ರೈತರು ಕೃಷಿ ಉತ್ಪನ್ನ ಮಾರುಕಟ್ಟೆಯಿಂದ ಪಡೆದ ಪ್ರಯೋಜನಗಳ ವಿವರವನದ್ನು ನೀಡಲಾಗಿದೆ. ಗಂಗಾವತಿಯಲ್ಲಿ ಶೇ.14.2ರಷ್ಟು ಲಾಭದಾಯಕ ಬೆಲೆಯನ್ನು ಖಚಿತಪಡಿಸಿಕೊಳ್ಳುವುದು ಎಂದಿದ್ದರೆ. ಶೇ,12.8ರಷ್ಟು ಸಂಕಷ್ಟದ ಮಾರಾಟವನ್ನು ತಪ್ಪಿಸುವುದು ಎಂದಿದ್ದರೆ. ಶೇ.16.4ರಷ್ಟು ಮಾರುಕಟ್ಟೆ ಮಾಹಿತಿ ಒದಗಿಸುವುದು ಎಂದಿದ್ದರೆ. ಶೇ.10.7ರಷ್ಟು ಮೂಲಸೌಕರ್ಯ ಸರಿಯಾದ ನಿರ್ವಹಣೆಯಾಗುತ್ತದೆ ಎಂದಿದ್ದರೆ. ಶೇ.9.2ರಷ್ಟು ಸರಿಯಾದ ತೂಕ ವ್ಯವಸ್ಥೆ ಇದೆ ಎಂದಿದ್ದರೆ. ಶೇ.10ರಷ್ಟು ತಕ್ಷಣದ ಪಾವತಿ ಸಿಗುತ್ತದೆ ಎಂದಿದ್ದರೆ. ಶೇ.12.8ರಷ್ಟು ಸ್ಪರ್ಧಾತ್ಮಕ ಖರೀದಿಸ ಬಹುದು ಎಂದಿದ್ದರೆ. ಶೇ.13.5ರಷ್ಟು ಬೆಂಬಲ ಬೆಲೆ ಖಚಿತಪಡಿಸಿಕೊಳ್ಳಬಹುದು ಎಂದಿರುವುದು ಕಂಡುಬರುತ್ತದೆ. ಕನಕಗಿರಿಯಲ್ಲಿ ಶೇ.17ರಷ್ಟು ಲಾಭದಾಯಕ ಬೆಲೆಯನ್ನು ಖಚಿತಪಡಿಸಿಕೊಳ್ಳುವುದು ಎಂದಿದ್ದರೆ. ಶೇ,21.4ರಷ್ಟು ಸಂಕಷ್ಟದ ಮಾರಾಟವನ್ನು ತಪ್ಪಿಸುವುದು ಎಂದಿದ್ದರೆ. ಶೇ.18.5ರಷ್ಟು ಮಾರುಕಟ್ಟೆ ಮಾಹಿತಿ ಒದಗಿಸುವುದು ಎಂದಿದ್ದರೆ. ಶೇ.8.5ರಷ್ಟು ಮೂಲಸೌಕರ್ಯ ಸರಿಯಾದ ನಿರ್ವಹಣೆಯಾಗುತ್ತದೆ ಎಂದಿದ್ದರೆ. ಶೇ.7ರಷ್ಟು ಸರಿಯಾದ ತೂಕ ವ್ಯವಸ್ಥೆ ಇದೆ ಎಂದಿದ್ದರೆ. ಶೇ.10ರಷ್ಟು ತಕ್ಷಣದ ಪಾವತಿ ಸಿಗುತ್ತದೆ ಎಂದಿದ್ದರೆ. ಶೇ.5.7ರಷ್ಟು ಸ್ಪರ್ಧಾತ್ಮಕ ಖರೀದಿಸ ಬಹುದು ಎಂದಿದ್ದರೆ. ಶೇ.11.4ರಷ್ಟು ಬೆಂಬಲ ಬೆಲೆ ಖಚಿತಪಡಿಸಿಕೊಳ್ಳಬಹುದು ಎಂದಿರುವುದು ಕಂಡುಬರುತ್ತದೆ. ಶ್ರೀರಾಮನಗರದಲ್ಲಿ ಶೇ.16.6ರಷ್ಟು ಲಾಭದಾಯಕ ಬೆಲೆಯನ್ನು ಖಚಿತಪಡಿಸಿಕೊಳ್ಳುವುದು ಎಂದಿದ್ದರೆ. ಶೇ,13.3ರಷ್ಟು ಸಂಕಷ್ಟದ ಮಾರಾಟವನ್ನು ತಪ್ಪಿಸುವುದು ಎಂದಿದ್ದರೆ. ಶೇ.15.5ರಷ್ಟು ಮಾರುಕಟ್ಟೆ ಮಾಹಿತಿ ಒದಗಿಸುವುದು ಎಂದಿದ್ದರೆ. ಶೇ.10ರಷ್ಟು ಮೂಲಸೌಕರ್ಯ ಸರಿಯಾದ ನಿರ್ವಹಣೆಯಾಗುತ್ತದೆ ಎಂದಿದ್ದರೆ. ಶೇ.13.3ರಷ್ಟು ಸರಿಯಾದ ತೂಕ ವ್ಯವಸ್ಥೆ ಇದೆ ಎಂದಿದ್ದರೆ. ಶೇ.14.4ರಷ್ಟು ತಕ್ಷಣದ ಪಾವತಿ ಸಿಗುತ್ತದೆ

ಎಂದಿದ್ದರೆ. ಶೇ.10ರಷ್ಟು ಸ್ಪರ್ಧಾತ್ಮಕ ಖರೀದಿಸ ಬಹುದು ಎಂದಿದ್ದರೆ. ಶೇ.8.8ರಷ್ಟು ಬೆಂಬಲ ಬೆಲೆ ಖಚಿತಪಡಿಸಿಕೊಳ್ಳಬಹುದು ಎಂದಿರುವುದು ಕಂಡುಬರುತ್ತದೆ.

ಒಟ್ಟಾರೆಯಾಗಿ ಶೇ.15.6ರಷ್ಟು ಲಾಭದಾಯಕ ಬೆಲೆಯನ್ನು ಖಚಿತಪಡಿಸಿಕೊಳ್ಳುವುದು ಎಂದಿದ್ದರೆ. ಶೇ,15ರಷ್ಟು ಸಂಕಷ್ಟದ ಮಾರಾಟವನ್ನು ತಪ್ಪಿಸುವುದು ಎಂದಿದ್ದರೆ. ಶೇ.16.6ರಷ್ಟು ಮಾರುಕಟ್ಟೆ ಮಾಹಿತಿ ಒದಗಿಸುವುದು ಎಂದಿದ್ದರೆ. ಶೇ.10.ರಷ್ಟು ಮೂಲಸೌಕರ್ಯ ಸರಿಯಾದ ನಿರ್ವಹಣೆಯಾಗುತ್ತದೆ ಎಂದಿದ್ದರೆ. ಶೇ.10ರಷ್ಟು ಸರಿಯಾದ ತೂಕ ವ್ಯವಸ್ಥೆ ಇದೆ ಎಂದಿದ್ದರೆ. ಶೇ.11.3ರಷ್ಟು ತಕ್ಷಣದ ಪಾವತಿ ಸಿಗುತ್ತದೆ ಎಂದಿದ್ದರೆ. ಶೇ.10.3ರಷ್ಟು ಸ್ಪರ್ಧಾತ್ಮಕ ಖರೀದಿಸ ಬಹುದು ಎಂದಿದ್ದರೆ. ಶೇ.11.6ರಷ್ಟು ಬೆಂಬಲ ಬೆಲೆ ಖಚಿತಪಡಿಸಿಕೊಳ್ಳಬಹುದು ಎಂದಿರುವುದು ಕಂಡುಬರುತ್ತದೆ.

**ಕೃಷಿ ಆದಾಯದಲ್ಲಿ ಹೆಚ್ಚಳ**

ಕ್ರಮಬದ್ಧವಾದ ಮಾರುಕಟ್ಟೆಯು ರೈತರಿಗೆ ಉತ್ತಮ ಬೆಲೆಯನ್ನು ದೊರಕಿಸುತ್ತದೆ. ಇಂತಹ ಮಾರುಕಟ್ಟೆ ವ್ಯವಸ್ಥೆಯು ಮಾರಾಟದಲ್ಲಿ ಮಧ್ಯವರ್ತಿಗಳ ಹಾವಳಿಯನ್ನು ನಿಯಂತ್ರಿಸುತ್ತದೆ. ಕೃಷಿ ಉತ್ಪನ್ನಗಳಿಗೆ ಸಮರ್ಪಕವಾದ ಬೆಲೆದೊರೆತಾಗ ರೈತನ ಆದಾಯ ಹೆಚ್ಚಾಗಿ, ಮತ್ತಷ್ಟು ಕೃಷಿಯಲ್ಲಿ ತೊಡಗಿಕೊಳ್ಳುತ್ತಾನೆ. ಅಲ್ಲದೆ ಕೃಷಿಯ ಅಭಿವೃದ್ಧಿಗಾಗಿ ಸಾಕಷ್ಟು ಸಂಪನ್ಮೂಲಗಳನ್ನು ಖರೀದಿಸುವುದರಲ್ಲಿ ತಲ್ಲೀನನಾಗುತ್ತಾನೆ. ಹೊಸ ಸಂಪನ್ಮೂಲಗಳು ಕೃಷಿಯ ಉತ್ಪಾದನೆಯನ್ನು ಹೆಚ್ಚಿಸಿ, ಮಾರಾಟ ಮಾಡುವುದರಿಂದ ರೈತರ ಆದಾಯ ಗಣನೀಯವಾಗಿ ಹೆಚ್ಚುವುದರಲ್ಲಿ ಯಾವುದೇ ಸಂದೇಹವಿಲ್ಲ.

**ಕೋಷ್ಟಕ 5: ಮಾರುಕಟ್ಟೆ ದರಕ್ಕಿಂತ ಬೆಂಬಲ ಬೆಲೆ ಹೆಚ್ಚಿದೆಯೇ ಎಂಬುದರ ವಿವರ**

| ವಿವರಗಳು | ಗಂಗಾವತಿ | | ಕನಕಗಿರಿ | | ಶ್ರೀರಾಮನಗ | | ಒಟ್ಟು | |
|---|---|---|---|---|---|---|---|---|
| | ಸಂ. | ಶೇ. | ಸಂ. | ಶೇ. | ಸಂ. | ಶೇ. | ಸಂ. | ಶೇ. |
| ಹೌದು | 91 | 65 | 46 | 65.8 | 64 | 71 | 201 | 67 |
| ಇಲ್ಲ | 49 | 35 | 24 | 34.2 | 26 | 29 | 99 | 33 |
| **ಒಟ್ಟು** | **140** | **100** | **70** | **100** | **90** | **100** | **300** | **100** |

**ಮೂಲ: ಕ್ಷೇತ್ರಕಾರ್ಯದ ಮಾಹಿತಿ**

ಕೋಷ್ಟಕ 5ರಲ್ಲಿ ರೈತರು ಬೆಳೆದಂತ ಬೆಳೆಗಳನ್ನು ಮಾರುಕಟ್ಟೆ ದರಕ್ಕಿಂತ ಬೆಂಬಲ ಬೆಲೆ ಹೆಚ್ಚಿದೆ ಎನ್ನುವುದರ ವಿವರವನ್ನು ನೀಡಲಾಗಿದೆ. ಗಂಗಾವತಿಯಲ್ಲಿ ಶೇ.65ರಷ್ಟು ರೈತರು ಮಾರುಕಟ್ಟೆ ದರಕ್ಕಿಂತ ಬೆಂಬಲ ಬೆಲೆ ಹೆಚ್ಚಿದೆ ಎಂದಿದ್ದಾರೆ. ಶೇ.35ರಷ್ಟು ರೈತರು ಮಾರುಕಟ್ಟೆ ದರಕ್ಕಿಂತ ಬೆಂಬಲ ಬೆಲೆ ಹೆಚ್ಚಿಲ್ಲೆಂದಿದ್ದಾರೆ. ಕನಕಗಿರಿಯಲ್ಲಿ ಶೇ.65.8ರಷ್ಟು ರೈತರು ಮಾರುಕಟ್ಟೆ ದರಕ್ಕಿಂತ ಬೆಂಬಲ ಬೆಲೆ ಹೆಚ್ಚಿದೆ ಎಂದಿದ್ದಾರೆ. ಶೇ.34.2ರಷ್ಟು ರೈತರು ಮಾರುಕಟ್ಟೆ ದರಕ್ಕಿಂತ ಬೆಂಬಲ ಬೆಲೆ ಹೆಚ್ಚಿಲ್ಲೆಂದಿದ್ದಾರೆ. ಶ್ರೀರಾಮನಗರದಲ್ಲಿ ಶೇ.71ರಷ್ಟು ರೈತರು ಮಾರುಕಟ್ಟೆ ದರಕ್ಕಿಂತ ಬೆಂಬಲ ಬೆಲೆ ಹೆಚ್ಚಿದೆ ಎಂದಿದ್ದಾರೆ. ಶೇ.14.6 ರಷ್ಟು ರೈತರು ಮಾರುಕಟ್ಟೆ ದರಕ್ಕಿಂತ ಬೆಂಬಲ ಬೆಲೆ ಹೆಚ್ಚಿಲ್ಲೆಂದಿದ್ದಾರೆ. ಹೊಸದುರ್ಗ ತಾಲ್ಲೂಕಿನಲ್ಲಿ ಶೇ.88 ರಷ್ಟು ರೈತರು ಮಾರುಕಟ್ಟೆ ದರಕ್ಕಿಂತ ಬೆಂಬಲ ಬೆಲೆ ಹೆಚ್ಚಿದೆ ಎಂದಿದ್ದಾರೆ. ಶೇ.29ರಷ್ಟು ರೈತರು ಮಾರುಕಟ್ಟೆ ದರಕ್ಕಿಂತ ಬೆಂಬಲ ಬೆಲೆ ಹೆಚ್ಚಿಲ್ಲೆಂದಿದ್ದಾರೆ.

ಒಟ್ಟಾರೆಯಾಗಿ ಶೇ.67ರಷ್ಟು ರೈತರು ಮಾರುಕಟ್ಟೆ ದರಕ್ಕಿಂತ ಬೆಂಬಲ ಬೆಲೆ ಹೆಚ್ಚಿದೆ ಎಂದಿದ್ದಾರೆ. ಶೇ.33ರಷ್ಟು ರೈತರು ಮಾರುಕಟ್ಟೆ ದರಕ್ಕಿಂತ ಬೆಂಬಲ ಬೆಲೆ ಹೆಚ್ಚಿಲ್ಲೆಂದಿದ್ದಾರೆ. ಮೇಲಿನ ಅಂಕಿ ಅಂಶಗಳನ್ನು ನೋಡಿದಾಗ ಅತಿ ಹೆಚ್ಚಿನ ಪ್ರಮಾಣದಲ್ಲಿ ರೈತರು ಬೆಳೆದಂತ ಬೆಳೆಗಳನ್ನು ಮಾರುಕಟ್ಟೆ ದರಕ್ಕಿಂತ

ಬೆಂಬಲ ಬೆಲೆ ಹೆಚ್ಚಿದೆ ಎಂದಿರುವುದು ಕ್ಷೇತ್ರಕಾರ್ಯದಲ್ಲಿ ತಿಳಿದುಬಂದಿದೆ.

**ಸಂಪನ್ಮೂಲಗಳ ಗರಿಷ್ಠ ಬಳಕೆ**

ದಕ್ಷವಾದ ಕೃಷಿ ಮಾರುಕಟ್ಟೆಯ ಅಸ್ತಿತ್ವದ ಫಲವಾಗಿ ಸಂಪನ್ಮೂಲಗಳು ಗರಿಷ್ಠ ಹಿತಸಾಧನೆಯಾಗುತ್ತದೆ. ಪರಿಣಾಮಕಾರಿಯಾದ ಮಾರುಕಟ್ಟೆ ವ್ಯವಸ್ಥೆಯು ಅಸ್ತಿತ್ವದಲ್ಲಿದ್ದರೆ ಸಾಗಾಟ, ಸಂಸ್ಕರಣೆ ಮತ್ತು ಸಂಗ್ರಹಣೆಯಲ್ಲಿ ಸಂಭವಿಸಬಹುದಾದ ಬೆಲೆಗೆ ಮಾರಾಟವಾಗುತ್ತವೆ. ಇದರಿಂದಾಗಿ ಕೃಷಿ ವಲಯ ಮತ್ತು ಸಂಬಂಧಿಸಿದ ವಲಯದ ಅಭಿವೃದ್ಧಿಯು ಸುಲಭವಾಗುತ್ತದೆ.

**ಕೃಷಿ ಆಧಾರಿತ ಕೈಗಾರಿಕೆಗಳ ಬೆಳವಣಿಗೆ**

ಪ್ರಮುಖ ಕೃಷಿ ಆಧಾರಿತ ಉದ್ದಿಮೆಗಳಾದ ಸಕ್ಕರೆ ಕೈಗಾರಿಕೆ, ಹತ್ತಿ, ಜವಳಿ ಕೈಗಾರಿಕೆ, ಸೆಣಬಿನ ಕೈಗಾರಿಕೆ, ರೇಷ್ಮೆ ಕೈಗಾರಿಕೆ, ಚರ್ಮ ಕೈಗಾರಿಕೆ ಇವು ಕೃಷಿ ವಲಯವನ್ನು ಅವಲಂಭಿಸಿದೆ. ದಕ್ಷವಾದ ಮಾರುಕಟ್ಟೆಯು ನಿಗದಿತ ಬೆಲೆಯಲ್ಲಿ ಕಚ್ಚಾವಸ್ತುಗಳನ್ನು ಪೂರೈಸುವುದರಿಂದ ಕೃಷಿ ಆಧಾರಿತ ಉದ್ದಿಮೆಗಳು ಸಹ ಬೆಳವಣಿಗೆ ಹೊಂದುತ್ತವೆ. ಇದು ಮಧ್ಯವರ್ತಿಗಳಿಗೆ ತೆರಬೇಕಾಗಿದ್ದ ಅಧಿಕ ಮೊತ್ತದ ಬೆಲೆಯನ್ನು ಕಡಿತಗೊಳಿಸಿ, ಉದ್ಯಮಗಳ ಪ್ರಗತಿಗೆ ಸಹಾಯಕವಾಗುತ್ತದೆ.

**ಕೃಷಿ ಮಾರುಕಟ್ಟೆಗಳಿಂದ ಉದ್ಯೋಗ ಸೃಷ್ಠಿ**

ಕೃಷಿ ಮಾರುಕಟ್ಟೆಯು ಲಕ್ಷಾಂತರ ಜನರಿಗೆ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಉದ್ಯೋಗವನ್ನು ಒದಗಿಸುತ್ತದೆ. ಪಿಂಡಿ ಕಟ್ಟುವಿಕೆ, ಸಾಗಿಸುವಿಕೆ, ಸಂಸ್ಕರಿಸುವಿಕೆ ಇತ್ಯಾದಿ ಉದ್ಯೋಗಗಳನ್ನು ಸೃಷ್ಠಿಸುತ್ತದೆ. ಇದಕ್ಕೆ ಉದಾಹರಣೆಯಾಗಿ ಮಾರುಕಟ್ಟೆಗಳಲ್ಲಿ ಸಾವಿರಾರು ಜನ ಉದ್ಯೋಗದಲ್ಲಿರುವುದನ್ನು ಕಾಣಬಹುದು. ಇಲ್ಲಿ ಪ್ರಮುಖವಾಗಿ ರೈತರು ತಮ್ಮ ವಸ್ತುಗಳನ್ನು ಟೆಂಪೋ, ಲಾರಿ ಇತ್ಯಾದಿಗಳಿಂದ ತಮ್ಮ ಸರಕುಗಳನ್ನು ತುಂಬಿಸಿಕೊಂಡು ಬಂದಾಗ ಅದನ್ನು ಲಾರಿ, ಟೆಂಪೋಗಳಿಂದ ಇಳಿಸಲು ಕೂಲಿ ಕಾರ್ಮಿಕರಿರುತ್ತಾರೆ. ಅವರು ಪ್ರತಿ ಮೂಟೆಗೆ 7ರೂನಂತೆ ಪಡೆಯುತ್ತಾರೆ. ನಂತರ ಒಂದೆಡೆ ರಾಶಿಯಾದ, ಆಲೂಗೆಡ್ಡೆಯನ್ನು ಮಹಿಳಾ ಕೂಲಿಕಾರ್ಮಿಕರು ಸಂಸ್ಕರಿಸುತ್ತಾರೆ. ಬಳಕ ಅದನ್ನು ತೂಕ ಹಾಕಲು ಮತ್ತಿಬ್ಬರಿರುತ್ತಾರೆ. ಹೀಗೆ ಮಾರುಕಟ್ಟೆಯು ಸ್ಥಳೀಯ ಜನರಿಗೆ ಹೆಚ್ಚಿನ ಪ್ರಮಾಣದಲ್ಲಿ ಉದ್ಯೋಗವಕಾಶಗಳನ್ನು ಸೃಷ್ಟಿಸುತ್ತದೆ. ಕೃಷಿ ಮಾರುಕಟ್ಟೆಗಳು ರಚನೆಯಾದಂತೆಲ್ಲಾ ಉದ್ಯೋಗಗಳು ಸೃಷ್ಠಿಯಾಗಿ, ಸ್ಥಳೀಯ ಭೂರಹಿತ ಕೂಲಿಕಾರ್ಮಿಕರಿಗೆ ಉದ್ಯೋಗವನ್ನು ಒದಗಿಸಿಕೊಡುತ್ತವೆ.

**ಹೊಸ ತಂತ್ರಜ್ಞಾನದ ಅಳವಡಿಕೆ**

ಕೃಷಿ ಮಾರುಕಟ್ಟೆಯಲ್ಲಿ ಬಿಳಿ ಚೀಟಿಯ ಬದಲಿಗೆ, ಕಂಪ್ಯೂಟರ್ ರಶೀದಿಯನ್ನು ನೀಡುವುದು. ಪ್ರತಿವರ್ಷ ಬರುವ ಕೃಷಿ ಸರಕುಗಳ ಗಣನೆ ಇದರಿಂದ ಸುಲಭವಾಗಿ ಪತ್ತೆಹಚ್ಚುವುದು. ಪ್ರಸ್ತುತದಲ್ಲಿ ಎಲೆಕ್ಟ್ರಾನಿಕ್ ತೂಕದ ಯಂತ್ರಗಳನ್ನು ಅಳವಡಿಸಿಕೊಳ್ಳುವುದರಿಂದ, ತೂಕದಲ್ಲಿನ ಮೋಸವನ್ನು ತಡೆಯಲೆತ್ನಿಸುತ್ತದೆ. ಪ್ರಸ್ತುತ 50 ಕೆ.ಜಿ.ಯ ಚೀಲಕ್ಕೆ 2 ಕೆ.ಜಿ, 100 ಕೆ.ಜಿ.ಯ ಚೀಲಕ್ಕೆ 4 ಕೆ.ಜಿಯನ್ನು ಕಡಿತಗೊಳಿಸುತ್ತಾರೆ. ಆದರೆ ವಾಸ್ತವವಾಗಿ ಚೀಲಗಳು ಇಷ್ಟು ಭಾರವಿರುವುದಿಲ್ಲ.

ಮಾರುಕಟ್ಟೆಗಳು ನಿರ್ದಿಷ್ಟ ಬೆಲೆ ಮತ್ತು ಉತ್ತಮ ಸರಕುಗಳನ್ನು ನೀಡಿದಾಗ ಮಾರುಕಟ್ಟೆಗೆ ಬರುವ ಗ್ರಾಹಕ ಪ್ರತಿನಿಧಿಗಳ ಸಂಖ್ಯೆ ಹೆಚ್ಚಳವಾಗುವುದರ ಜೊತೆಗೆ, ಕೃಷಿ ಉತ್ಪನ್ನಗಳಿಗೆ ಬೇಡಿಕೆಯನ್ನು ಹೆಚ್ಚಿಸುತ್ತದೆ.

**ಕೃಷಿ ವ್ಯಾಪಾರ ಮಾರುಕಟ್ಟೆಗಳು**

ವ್ಯವಸಾಯಉತ್ಪನ್ನಗಳ ಸಗಟು ಮಾರುಕಟ್ಟೆಯನ್ನು 4 ವಿಧಗಳಾಗಿ ವಿಂಗಡಿಸಬಹುದು. ಮಾರುಕಟ್ಟೆಯ ವರ್ಗೀಕರಣವನ್ನು ಹಲವಾರು ಆಯಾಮಗಳನ್ನು ಆಧಾರವಾಗಿಟ್ಟುಕೊಂಡು ವರ್ಗೀಕರಣ ಮಾಡಬಹುದು.

**ಕೋಷ್ಟಕ 6: ನೇರ ಮಾರಾಟ ಪದ್ಧತಿ ವ್ಯವಸ್ಥೆಯ ವಿವರ.**

| ವಿವರಗಳು | ಗಂಗಾವತಿ | | ಕನಕಗಿರಿ | | ಶ್ರೀರಾಮನಗರ | | ಒಟ್ಟು | |
|---|---|---|---|---|---|---|---|---|
| | ಸಂ. | ಶೇ. | ಸಂ. | ಶೇ. | ಸಂ. | ಶೇ. | ಸಂ. | ಶೇ. |
| ಇರುತ್ತದೆ | 62 | 44.2 | 32 | 45.7 | 43 | 47.7 | 137 | 45.6 |
| ಇರುವುದಿಲ್ಲ | 56 | 40 | 22 | 31.3 | 26 | 28.8 | 104 | 34.6 |
| ಗೊತ್ತಿಲ್ಲ | 22 | 15.8 | 16 | 22 | 21 | 23.3 | 59 | 19.6 |
| **ಒಟ್ಟು** | **140** | **100** | **70** | **100** | **90** | **100** | **300** | **100** |

**ಮೂಲ: ಕ್ಷೇತ್ರಕಾರ್ಯದ ಮಾಹಿತಿ**

ಕೋಷ್ಟಕ 6ರಲ್ಲಿ ನೇರ ಮಾರಾಟ ಪದ್ಧತಿ ವ್ಯವಸ್ಥೆಯ ವಿವರವನ್ನು ನೀಡಲಾಗಿದೆ. ಗಂಗಾವತಿಯಲ್ಲಿ ಶೇ.44.2ರಷ್ಟು ನೇರ ಮಾರಾಟ ಪದ್ಧತಿಯ ವ್ಯವಸ್ಥೆ ಇರುತ್ತದೆ ಎಂದಿದ್ದಾರೆ. ಶೇ.40ರಷ್ಟು ಇರುವುದಿಲ್ಲ ಎಂದಿದ್ದಾರೆ. ಶೇ.15.8ರಷ್ಟು ನಮ್ಮಗೆ ಗೋತ್ತಿಲ್ಲ ಎಂದಿರುವುದು ಕಂಡುಬರುತ್ತದೆ. ಕನಕಗಿರಿಯಲ್ಲಿ ಶೇ.45.7ರಷ್ಟು ನೇರ ಮಾರಾಟ ಪದ್ಧತಿಯ ವ್ಯವಸ್ಥೆ ಇರುತ್ತದೆ ಎಂದಿದ್ದಾರೆ. ಶೇ.31.2ರಷ್ಟು ಇರುವುದಿಲ್ಲ ಎಂದಿದ್ದಾರೆ. ಶೇ.22ರಷ್ಟು ನಮ್ಮಗೆ ಗೋತ್ತಿಲ್ಲ ಎಂದಿರುವುದು ತಿಳಿದುಬರುತ್ತದೆ. ಶ್ರೀರಾಮನಗರದಲ್ಲಿ ಶೇ.47.7ರಷ್ಟು ನೇರ ಮಾರಾಟ ಪದ್ಧತಿಯ ವ್ಯವಸ್ಥೆ ಇರುತ್ತದೆ ಎಂದಿದ್ದಾರೆ. ಶೇ.28.8ರಷ್ಟು ಇರುವುದಿಲ್ಲ ಎಂದಿದ್ದಾರೆ. ಶೇ.21ರಷ್ಟು ನಮ್ಮಗೆ ಗೋತ್ತಿಲ್ಲ ಎಂದಿರುವುದು ಕಂಡುಬರುತ್ತದೆ.

ಒಟ್ಟಾರೆಯಾಗಿ ಶೇ.45.6ರಷ್ಟು ನೇರ ಮಾರಾಟ ಪದ್ಧತಿಯ ವ್ಯವಸ್ಥೆ ಇರುತ್ತದೆ ಎಂದಿದ್ದಾರೆ. ಶೇ.34.6ರಷ್ಟು ಇರುವುದಿಲ್ಲ ಎಂದಿದ್ದಾರೆ. ಶೇ.19.6ರಷ್ಟು ನಮ್ಮಗೆ ಗೋತ್ತಿಲ್ಲ ಎಂದಿದ್ದಾರೆ. ಮೇಲಿನ ಅಂಕಿ ಅಂಶಗಳ ಮೂಲಕ ಅತಿ ಹೆಚ್ಚಿನ ಪ್ರಮಾಣದಲ್ಲಿ ನೇರ ಮಾರಾಟ ಪದ್ಧತಿಯ ವ್ಯವಸ್ಥೆ ಇದೆ ಎಂದಿರುವುದು ಕ್ಷೇತ್ರಕಾರ್ಯದ ಮೂಲಕ ತಿಳಿದುಬರುತ್ತದೆ.

**ಕೋಷ್ಟಕ 7: ರೈತರು ಬೆಳೆದ ಬೆಳೆಯನ್ನು ಮಾರಾಟದ ವಿವರ**

| ವಿವರಗಳು | ಗಂಗಾವತಿ | | ಕನಕಗಿರಿ | | ಶ್ರೀರಾಮನಗರ | | **ಒಟ್ಟು** | |
|---|---|---|---|---|---|---|---|---|
| | ಸಂ. | ಶೇ. | ಸಂ. | ಶೇ. | ಸಂ. | ಶೇ. | ಸಂ. | ಶೇ. |
| ಸ್ಥಳೀಯ ಮಾರುಕಟ್ಟೆ | 22 | 15.8 | 16 | 22 | 21 | 23.3 | 59 | 19.6 |
| ಸ್ಥಳೀಯ ಲೇವಾದೇವಿಗಾರರ ಹತ್ತಿರ | 56 | 40.0 | 22 | 31.3 | 26 | 28.8 | 104 | 34.6 |
| ಎ.ಪಿ.ಎಂ.ಸಿ. | 62 | 44.2 | 32 | 45.7 | 43 | 47.7 | 137 | 45.6 |
| **ಒಟ್ಟು** | **140** | **100** | **70** | **100** | **90** | **100** | **300** | **100** |

**ಮೂಲ : ಕ್ಷೇತ್ರಕಾರ್ಯದ ಮಾಹಿತಿ**

ಕೋಷ್ಟಕ 7 ರಲ್ಲಿ ಬೆಳೆದ ಬೆಳೆಯನ್ನು ಮಾರಾಟ ಮಾಡುವ ವಿವರಗಳನ್ನು ತಿಳಿಸುತ್ತದೆ. ಒಟ್ಟಾರೆಯಾಗಿ ಶೇ.19.6ರಷ್ಟು ರೈತರು ಬೆಳೆದ ಬೆಳೆಯನ್ನು ಸ್ಥಳೀಯ ಮಾರುಕಟ್ಟೆಯಲ್ಲಿ ಮಾರಾಟ ಮಾಡುತ್ತಾರೆ, ಶೇ.34.6ರಷ್ಟು ರೈತರು ಬೆಳೆದ ಬೆಳೆಯನ್ನು ಸ್ಥಳೀಯ ಲೇವಾದೇವಿಗಾರರ ಹತ್ತಿರ ಮಾರಾಟ ಮಾಡುತ್ತಾರೆ ಎಂದಿದ್ದಾರೆ. ಶೇ.45.6ರಷ್ಟು ರೈತರು ಬೆಳೆದ ಬೆಳೆಯನ್ನು ಎ.ಪಿ.ಎಂ.ಸಿ ಮಾರುಕಟ್ಟೆಯಲ್ಲಿ ಮಾರಾಟ ಮಾಡುತ್ತಾರೆ ಎಂದು ಹೆಳಿದ್ದಾರೆ. ಈ ಮೇಲಿನ ಕೋಷ್ಟಕವನ್ನು ಗಮನಿಸಿ ನೋಡಿದಾಗ ಅತೀ ಹೆಚ್ಚಿನ

ಸಂಖ್ಯೆಯಲಿ ಎ.ಪಿ.ಎಂ.ಸಿಯಲ್ಲಿ ಮಾರಾಟ ಮಾಡುತ್ತೇವೆ ಎಂದಿರುವುದು ಕ್ಷೇತ್ರಕಾರ್ಯದ ಮೂಲಕ ತಿಳಿದು ಬರುತ್ತದೆ.

**ದಲ್ಲಾಳಿ ಮಾರುಕಟ್ಟೆ**

ಭಾರತ ದೇಶದಲ್ಲಿ ಕೃಷಿ ಮೂಲ ಬಳಕೆ ವಸ್ತುಗಳ ಮಾರಾಟದಲ್ಲಿ ದಲ್ಲಾಳಿಗೆ ಅವನದೇ ಆದ ಒಂದು ಪಾತ್ರ ಇನ್ನೂ ಉಳದಿದೆ. ಭಾರತ ದೇಶದ ದಲ್ಲಾಳಿ, ಕೇಂದ್ರೀಯ ಮಾರುಕಟ್ಟೆಯಿಂದಲೇ ಆಗಲಿ ಹಾಗೂ ಸ್ಥಳೀಯ ಮಾರುಕಟ್ಟೆಯಿಂದಲೇ ಆಗಲಿ ಕೃಷಿ ಮೂಲ ವಸ್ತುಗಳನ್ನು ದೊಡ್ಡ ಪ್ರಮಾಣದಲ್ಲಿ ಕೊಂಡು ಸಣ್ಣ ಪ್ರಮಾಣದಲ್ಲಿ ಚಿಲ್ಲರೆ ವ್ಯಾಪಾರಿಗಳಿಗೆ ಮಾರುತ್ತಾರೆ. ಇಂತಹ ದಲ್ಲಾಳಿಗಳಿಂದ ದಲ್ಲಾಳಿ ಮಾರುಕಟ್ಟೆ ರಚಿತವಾಗಿರುತ್ತದೆ.

**ಕೋಷ್ಟಕ 8: ಎ.ಪಿ.ಎಂ.ಸಿಯಲ್ಲಿ ರೈತರು ಬೆಳೆಯನ್ನು ಮಾರುವಾಗ ದಲ್ಲಾಳಿಗಳ ತೊಂದರೆಗಳ ವಿವರ**

| **ವಿವರಗಳು** | ಗಂಗಾವತಿ | | ಕನಕಗಿರಿ | | ಶ್ರೀರಾಮನಗರ | | ಒಟ್ಟು | |
|---|---|---|---|---|---|---|---|---|
| | ಸಂ. | ಶೇ. | ಸಂ. | ಶೇ. | ಸಂ. | ಶೇ. | ಸಂ. | ಶೇ. |
| ಹೌದು | 91 | 65 | 46 | 65.8 | 64 | 71 | 201 | 67 |
| ಇಲ್ಲ | 49 | 35 | 24 | 34.2 | 26 | 29 | 99 | 33 |
| **ಒಟ್ಟು** | **140** | **100** | **70** | **100** | **90** | **100** | **300** | **100** |

**ಮೂಲ: ಕ್ಷೇತ್ರಕಾರ್ಯದ ಮಾಹಿತಿ**

ಕೋಷ್ಟಕ 8 ರಲ್ಲಿ ಎ.ಪಿ.ಎಂ.ಸಿಯಲ್ಲಿ ರೈತರು ಬೆಳೆಯನ್ನು ಮಾರುವಾಗ ದಲ್ಲಾಳಿಗಳಿಂದ ಆಗುವ ತೊಂದರೆಗಳ ವಿವರಗಳನ್ನು ನೀಡಲಾಗಿದೆ. ಗಂಗಾವತಿಯಲ್ಲಿ ಶೇ.65ರಷ್ಟು ಎಪಿ.ಎಂ.ಸಿಯಲ್ಲಿ ರೈತರು ಬೆಳೆಯನ್ನು ಮಾರುವಾಗ ದಲ್ಲಾಳಿಗಳಿಂದ ತೊಂದರೆಗಳು ಆಗುತ್ತದೆ ಎಂದಿದ್ದಾರೆ. ಶೇ.35ರಷ್ಟು ಎಪಿ.ಎಂ.ಸಿಯಲ್ಲಿ ರೈತರು ಬೆಳೆಯನ್ನು ಮಾರುವಾಗ ದಲ್ಲಾಳಿಗಳಿಂದ ತೊಂದರೆಗಳು ಆಗುವುದಿಲ್ಲ ಎಂದಿರುವುದು ಕಂಡುಬರುತ್ತದೆ. ಕನಕಗಿರಿಯಲ್ಲಿ ಶೇ.65.8ರಷ್ಟು ಎಪಿ.ಎಂ.ಸಿಯಲ್ಲಿ ರೈತರು ಬೆಳೆಯನ್ನು ಮಾರುವಾಗ ದಲ್ಲಾಳಿಗಳಿಂದ ತೊಂದರೆಗಳು ಆಗುತ್ತದೆ ಎಂದಿದ್ದಾರೆ. ಶೇ.34.2ರಷ್ಟು ಎಪಿ.ಎಂ.ಸಿಯಲ್ಲಿ ರೈತರು ಬೆಳೆಯನ್ನು ಮಾರುವಾಗ ದಲ್ಲಾಳಿಗಳಿಂದ ತೊಂದರೆಗಳು ಆಗುವುದಿಲ್ಲ ಎಂದಿರುವುದು ತಿಳಿದುಬರುತ್ತದೆ. ಶ್ರೀರಾಮನಗರದಲ್ಲಿ ಶೇ.71ರಷ್ಟು ಎಪಿ.ಎಂ.ಸಿಯಲ್ಲಿ ರೈತರು ಬೆಳೆಯನ್ನು ಮಾರುವಾಗ ದಲ್ಲಾಳಿಗಳಿಂದ ತೊಂದರೆಗಳು ಆಗುತ್ತದೆ ಎಂದಿದ್ದಾರೆ. ಶೇ.29ರಷ್ಟು ಎಪಿ.ಎಂ.ಸಿಯಲ್ಲಿ ರೈತರು ಬೆಳೆಯನ್ನು ಮಾರುವಾಗ ದಲ್ಲಾಳಿಗಳಿಂದ ತೊಂದರೆಗಳು ಆಗುವುದಿಲ್ಲ ಎಂದಿರುವುದು ಕಂಡುಬಂದಿದೆ.

ಒಟ್ಟಾರೆಯಾಗಿ ಶೇ.67ರಷ್ಟು ಎಪಿ.ಎಂ.ಸಿಯಲ್ಲಿ ರೈತರು ಬೆಳೆಯನ್ನು ಮಾರುವಾಗ ದಲ್ಲಾಳಿಗಳಿಂದ ತೊಂದರೆಗಳು ಆಗುತ್ತದೆ ಎಂದಿದ್ದಾರೆ. ಶೇ.33ರಷ್ಟು ಎಪಿ.ಎಂ.ಸಿಯಲ್ಲಿ ರೈತರು ಬೆಳೆಯನ್ನು ಮಾರುವಾಗ ದಲ್ಲಾಳಿಗಳಿಂದ ತೊಂದರೆಗಳು ಆಗುವುದಿಲ್ಲ ಎಂದಿದ್ದಾರೆ. ಈ ಮೇಲಿನ ಕೋಷ್ಟಕವನ್ನು ಗಮನಿಸಿ ನೋಡಿದಾಗ ಅತೀ ಹೆಚ್ಚಿನ ಸಂಖ್ಯೆಯಲ್ಲಿ ಎಪಿ.ಎಂ.ಸಿಯಲ್ಲಿ ರೈತರು ಬೆಳೆಯನ್ನು ಮಾರುವಾಗ ದಲ್ಲಾಳಿಗಳಿಂದ ತೊಂದರೆಗಳು ಆಗುತ್ತದೆ ಎಂದು ಕ್ಷೇತ್ರಕಾರ್ಯದ ಮೂಲಕ ತಿಳಿದು ಬರುತ್ತದೆ.

ಎ.ಪಿ.ಎಂ.ಸಿಯಲ್ಲಿ ರೈತರು ಬೆಳೆಯನ್ನು ಮಾರುವಾಗ ದಲ್ಲಾಳಿಗಳಿಂದ ತೊಂದರೆಗಳೆಂದರೆ ಗಂಗಾವತಿಯಲ್ಲಿ ಶೇ.28.5ರಷ್ಟು ರೈತರು ತೂಕದಲ್ಲಿ ಮೋಸವಾಗುತ್ತದೆ ಎಂದಿದ್ದಾರೆ. ಶೇ.24ರಷ್ಟು ರೈತರು ಬೆಲೆ ನಿಗದಿಪಡಿಸುವಲ್ಲಿ ತಾರತಮ್ಯವಾಗುತ್ತದೆ ಎಂದಿದ್ದಾರೆ. ಶೇ.47.5ರಷ್ಟು ರೈತರು ಸಾಲದ ಮೇಲೆ ಅಧಿಕ ಬಡ್ಡಿದರವಾಗುತ್ತದೆ ಎಂದಿದ್ದಾರೆ.

**ಕೋಷ್ಟಕ 9: ರೈತರು ಎಪಿಎಂಸಿಯಲ್ಲಿ ಎದುರಿಸುತ್ತಿರುವ ತೊಂದರೆಗಳ ವಿವರ**

| **ಉಪಸೂಚಕಗಳು** | ಗಂಗಾವತಿ | | ಕನಕಗಿರಿ | | ಶ್ರೀರಾಮನಗರ | | ಒಟ್ಟು | |
|---|---|---|---|---|---|---|---|---|
| ತೂಕದಲ್ಲಿ ಮೋಸ | 26 | 28.5 | 19 | 41.3 | 21 | 22.3 | 66 | 32.8 |
| ಬೆಲೆ ನಿಗದಿಪಡಿಸುವಲ್ಲಿ ತಾರತಮ್ಯ | 22 | 24 | 9 | 19.5 | 12 | 12.7 | 43 | 21.3 |
| ಸಾಲದ ಮೇಲೆ ಅಧಿಕ ಬಡ್ಡಿದರ | 43 | 47.5 | 18 | 39.2 | 31 | 32. | 92 | 45.7 |
| ಒಟ್ಟು | 91 | 100 | 46 | 100 | 64 | 100 | 201 | 100 |

**ಮೂಲ : ಕ್ಷೇತ್ರಕಾರ್ಯದ ಮಾಹಿತಿ**

ಕನಕಗಿರಿಯಲ್ಲಿ ಶೇ.41.3ರಷ್ಟು ರೈತರು ತೂಕದಲ್ಲಿ ಮೊಸವಾಗುತ್ತದೆ ಎಂದಿದ್ದಾರೆ. ಶೇ.19.5ರಷ್ಟು ರೈತರು ಬೆಲೆ ನಿಗದಿಪಡಿಸುವಲ್ಲಿ ತಾರತಮ್ಯವಾಗುತ್ತದೆ ಎಂದಿದ್ದಾರೆ. ಶೇ.39.3ರಷ್ಟು ರೈತರು ಸಾಲದ ಮೇಲೆ ಅಧಿಕ ಬಡ್ಡಿದರವಾಗುತ್ತದೆ ಎಂದಿದ್ದಾರೆ.

ಶ್ರೀರಾಮನಗರದಲ್ಲಿ ಶೇ.22.3ರಷ್ಟು ರೈತರು ತೂಕದಲ್ಲಿ ಮೊಸವಾಗುತ್ತದೆ ಎಂದಿದ್ದಾರೆ. ಶೇ.12.7ರಷ್ಟು ರೈತರು ಬೆಲೆ ನಿಗದಿಪಡಿಸುವಲ್ಲಿ ತಾರತಮ್ಯವಾಗುತ್ತದೆ ಎಂದಿದ್ದಾರೆ. ಶೇ.32ರಷ್ಟು ರೈತರು ಸಾಲದ ಮೇಲೆ ಅಧಿಕ ಬಡ್ಡಿದರವಾಗುತ್ತದೆ ಎಂದಿದ್ದಾರೆ.

ಒಟ್ಟಾರೆಯಾಗಿ ಶೇ.32.8ರಷ್ಟು ರೈತರು ತೂಕದಲ್ಲಿ ಮೊಸವಾಗುತ್ತದೆ ಎಂದಿದ್ದಾರೆ. ಶೇ.21.3ರಷ್ಟು ರೈತರು ಬೆಲೆ ನಿಗದಿಪಡಿಸುವಲ್ಲಿ ತಾರತಮ್ಯವಾಗುತ್ತದೆ ಎಂದಿದ್ದಾರೆ. ಶೇ.45.7ರಷ್ಟು ರೈತರು ಸಾಲದ ಮೇಲೆ ಅಧಿಕ ಬಡ್ಡಿದರವಾಗುತ್ತದೆ ಎಂದಿದ್ದಾರೆ. ಮೇಲಿನ ಅಂಕಿ ಅಂಶಗಳನ್ನು ನೋಡಿದಾಗ ಅತಿ ಹೆಚ್ಚಿನ ಪ್ರಮಾಣದಲ್ಲಿ ರೈತರು ಸಾಲದ ಮೇಲೆ ಅಧಿಕ ಬಡ್ಡಿದರವಾಗುತ್ತದೆ ಎಂದಿರುವುದು ತಿಳಿದುಬರುತ್ತದೆ.

**ಉಪಸಂಹಾರ**

ಒಟ್ಟಾರೆಯಾಗಿ ಹೇಳುವುದಾದರೆ ರೈತರ ಆರ್ಥಿಕ ಪ್ರಗತಿಯಲ್ಲಿ ಕೃಷಿ ಮಾರುಕಟ್ಟೆಗಳ ಪಾತ್ರವೇನು ಎಂಬುದನ್ನು ಈ ಚರ್ಚಿಸಿದೆ. ಮಾರುಕಟ್ಟೆಯ ಸರಿಯಾದ ಕಾರ್ಯನಿರ್ವಹಣೆ ರೈತರಿಗೆ ಅವರ ಬೆಳೆಗಳಿಗೆ ನ್ಯಾಯಸಂಗತ ಬೆಲೆ ನೀಡಲು ಮತ್ತು ಆರ್ಥಿಕ ಸ್ಥಿರತೆಯನ್ನು ಸಾಧಿಸಲು ಸಹಾಯಕವಾಗುತ್ತದೆ. ಆದಾಗ್ಯೂ, ರೈತರು ಮಧ್ಯವರ್ತಿಗಳ ಪ್ರಭಾವ, ಮಾರುಕಟ್ಟೆ ಮಾಹಿತಿ ಕೊರತೆ, ಹಾಗೂ ಮೂಲಸೌಕರ್ಯಗಳ ಅಭಾವದಿಂದ ಅನೇಕಾ ಸವಾಲುಗಳನ್ನು ಎದುರಿಸುತ್ತಿದ್ದಾರೆ.

ಈ ಅಧ್ಯಯನದಿಂದ ತಿಳಿದುಬಂದಂತೆ, ಕೃಷಿ ಮಾರುಕಟ್ಟೆ ವ್ಯವಸ್ಥೆಯನ್ನು ಸುಧಾರಿಸಲು ಕಟ್ಟುನಿಟ್ಟಾದ ಹಲವು ಕ್ರಮಗಳನ್ನು ಅನುಷ್ಠಾನಗೊಳಿಸುವ ಅಗತ್ಯವಿದೆ. ಡಿಜಿಟಲ್ ತಂತ್ರಜ್ಞಾನಗಳನ್ನು ಅನುಸರಿಸುವುದು, ನೇರ ಮಾರಾಟ ಪ್ಲಾಟ್‌ಫಾರ್ಮ್‌ಗಳನ್ನು ಪ್ರೋತ್ಸಾಹಿಸುವುದು, ಬೆಳೆ ವಿಮೆ ಮತ್ತು ಬೆಂಬಲ ಬೆಲೆಗಳನ್ನು ಪರಿಣಾಮಕಾರಿಯಾಗಿ ಜಾರಿಗೆ ತರುವುದು ಮುಖ್ಯವಾಗಿವೆ. ಇವು ರೈತರ ಆದಾಯವನ್ನು ಹೆಚ್ಚಿಸಲು ಮತ್ತು ಅವರ ಜೀವನಮಟ್ಟವನ್ನು ಸುಧಾರಿಸಲು ಪ್ರಮುಖವಾಗಲಿವೆ.

ರೈತರು ದೇಶದ ಆರ್ಥಿಕತೆಯ ಶಕ್ತಿ ಕೇಂದ್ರಗಳಾಗಿದ್ದಾರೆ. ಅವರ ಬೆಳೆಗಳಿಗೆ ಸೂಕ್ತ ಮೌಲ್ಯ ದೊರಕಲು ಕೃಷಿ ಮಾರುಕಟ್ಟೆ ವ್ಯವಸ್ಥೆಯಲ್ಲಿ ಸಮಗ್ರ ಸುಧಾರಣೆಗಳನ್ನು ತರಲು ಸರ್ಕಾರ, ಸಹಕಾರ ಸಂಸ್ಥೆಗಳು, ಹಾಗೂ ತಾಂತ್ರಿಕ ನಾವೀನ್ಯತೆಗಳನ್ನು ಬೆಂಬಲಿಸುವ ನಿಲುವು ಅಗತ್ಯವಾಗಿದೆ. ಶಕ್ತಿ ತುಂಬಿದ ಕೃಷಿ ಮಾರುಕಟ್ಟೆ ವ್ಯವಸ್ಥೆಯು ಶಕ್ತಿ ತುಂಬಿದ ರೈತರ

ಸಮುದಾಯವನ್ನು ನಿರ್ಮಿಸಬಲ್ಲದು, ಇದು ಭಾರತದ ಆರ್ಥಿಕ ಪ್ರಗತಿಯ ಅಡಿಗಲ್ಲಾಗುತ್ತದೆ.

**ಪರಾಮರ್ಶನ ಗ್ರಂಥಗಳು**


- ದೇವರಾಜು, ಎನ್. (2017). *ಗ್ರಾಮೀಣಾಭಿವೃದ್ಧಿ ಮತ್ತು ರೈತರ ಜೀವನ.* ಜನಪ್ರಿಯ ಪ್ರಕಾಶನ.
- ಕೆಂಪೇಗೌಡ, ಬಿ. (2015). *ಭಾರತದ ಕೃಷಿ ಆರ್ಥಿಕತೆ.* ನವಕರ್ನಾಟಕ ಪ್ರಕಾಶನ.
- ಕೇಶವಮೂರ್ತಿ, ಎ. (2018). *ರೈತ ಮತ್ತು ಕೃಷಿ ಮಾರುಕಟ್ಟೆ.* ಸಪ್ನ ಬುಕ್ ಹೌಸ್.
- ಮಂಜುನಾಥ, ಎಚ್. (2020). *ಕೃಷಿ ಮಾರುಕಟ್ಟೆ ಸಮಸ್ಯೆಗಳು ಮತ್ತು ಪರಿಹಾರಗಳು.* ಪವಿತ್ರ ಪ್ರಕಾಶನ.
- ರಂಗಸ್ವಾಮಿ, ಎನ್. (2019). *ಕೃಷಿ ನವೀನತೆ ಮತ್ತು ತಾಂತ್ರಿಕತೆ.* ನವಚೇತನ ಪಬ್ಲಿಕೇಶನ್ಸ್.
- ಶಿವಕುಮಾರ್, ಬಿ. (2021). *ರೈತರ ಸಮಸ್ಯೆಗಳು ಮತ್ತು ನೀತಿಗಳು.* ಪದ್ಮಾ ಪ್ರಕಾಶನ.
- Acharya, S. S. (2004). *Agricultural marketing in India* (4th ed.). Oxford & IBH Publishing Co.
- Acharya, S. S., & Agarwal, N. L. (1994). *Indian agriculture: Problems, progress, and prospects*. Oxford & IBH Publishing Co.
- Bagchi, A. K. (2005). *Farmers, markets and the state in India*. Routledge.
- Bhalla, G. S., & Singh, G. (2001). *Agricultural marketing: Structural and functional changes*. Concept Publishing Company.
- Lekhi, R. K., & Singh, J. (2020). *Agricultural development in India: Issues and challenges*. Kalyani Publishers.
- Sadhu, A. N., & Singh, A. (2020). *Indian agricultural economy* (6th ed.). Himalaya Publishing House.
- Singh, K. (2009). *Rural development: Principles, policies, and management* (3rd ed.). Sage Publications.
- Singh, R. (2023). *Indian economy* (14th ed.). McGraw Hill Education.
- Sundaram, K. V. (2001). *Agriculture and rural development*. New Century Publications.